ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಮಾನ್ಯ ಅಧ್ಯಕ್ಷರೇ. ಈಗ ನಮ್ಮಲ್ಲಿ ಇರತಕ್ಕ ೮೧ ಲಕ್ಷ ಈ ಜನರಿಗೆ ಸರಿಸಮಾನವಾಗಿ ಹಂಚಬೇಕಾದರೆ ಕೇಂದ್ರ ಸರ್ಕಾರದವರು ನಮಗೆ ಆಹಾರ ಸಾಮಗ್ರಿಗಳನ್ನು ಹೆಚ್ಚು ಕೊಡಬೇಕಾಗುತ್ತದೆ. ಈಗಿರತಕ್ಕ ವ್ಯವಸ್ಥೆಯಲ್ಲಿ ನಾವು ಆಹಾರ ಸರಬರಾಜು ಮಾಡುತ್ತಿದ್ದೇವೆ. ತಾಳೆ ಎಣ್ಣೆ ಮತ್ತು ಅಕ್ಕಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಕೊಡತಕ್ಕ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಕೆ.ಜಿ.ಎಫ್ ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿ ವರ್ಗ

೬೮೦. ಶ್ರೀ ಟಿ. ಎಸ್. ಮಣಿ(ಕೆ.ಜಿ.ಎಫ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ.ಜಿ.ಎಫ್. ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ದಾದಿಯರುಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಇ) ೧೯೮೭–೮೮ನೇ ಇಸವಿಯಲ್ಲಿ ಈ ಆಸ್ಪತ್ರೆಗೆ ಎಷ್ಟು ಹಣವನ್ನು ನೀಡಲಾಗಿದೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು) —

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರೂ. ೭೩,೭೫,೦೦೦–೦೦ ಗಳನ್ನು ಒದಗಿಸಲಾಗಿದೆ.

ಶ್ರೀ ಟಿ. ಎಸ್. ಮಣಿ.— ಅಧ್ಯಕ್ಷರೇ, ಕೆ.ಜಿ.ಎಫ್. ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ದಾದಿಯರುಗಳ ಕೊರತೆ ಎಷ್ಟು ಪ್ರಮಾಣದಲ್ಲಿ ಇದೆ ಎನ್ನುವ ಬಗ್ಗೆ ನಾನು ವಿವರವನ್ನು ಕೊಟ್ಟರೆ, ಮಾನ್ಯ ಮಂತ್ರಿಗಳು ಅದನ್ನು ಭರ್ತಿ ಮಾಡುತ್ತಾರೆಯೇ ?

ಶ್ರೀ ಬಿ. ರಾಚಯ್ಯ.— ಅಲ್ಲಿ ಒಬ್ಬರು ಸರ್ಜನ್ ಇರಬೇಕಾಗಿತ್ತು. ಅವರು ಅಲ್ಲಿ ಇದ್ದಾರೆ. ಹೆಲ್ತ್ ಆಫೀಸರ್ಸ್ ''ಎ'' ಗ್ರೇಡ್ ಐದು ಜನ ಇರಬೇಕಾಗಿತ್ತು. ಐದೂ ಜನ ಇದ್ದಾರೆ. ಹೆಲ್ತ್ ಆಫೀಸರ್ಸ್, ಕಮ್ ಅಸಿಸ್ಟೆಂಟ್ ಸರ್ಜನ್ಸ್ ಎಂಟು ಜನ ಇರಬೇಕಾಗಿತ್ತು. ಎಂಟು ಜನರೂ ಇದ್ದಾರೆ. ಡೆಪ್ಯುಟಿ ಡೆಂಟಲ್ ಸರ್ಜನ್ ಅವರು ಇಲ್ಲಿ ಒಬ್ಬರೂ ಇರಬೇಕಾಗಿತ್ತು, ಈಗ ನಾವು ಅವರನ್ನು ಪೋಸ್ಟ್ ಮಾಡಿದ್ದು, ಅವರೂ ಹೋಗಿದ್ದಾರೆ. ಸ್ಟಾಫ್ ನರ್ಸ್ ೨೪ರಲ್ಲಿ ೨೪ ಜನರೂ ಕೆಲಸ ಮಾಡುತ್ತಿದ್ದಾರೆ.

SRI T. S. MANI.-- The amount provided is not sufficient. Since there is heavy increase in the number of patients, will the Government see that the amount provided is atleast doubled ?

ಶ್ರೀ ಬಿ. ರಾಚಯ್ಯ.— ನನಗೆ ಹೆಚ್ಚು ಹಣಕಾಸು ಸಿಕ್ಕಿದರೆ ತಕ್ಕ ಪ್ರಮಾಣದಲ್ಲಿ ಇಲ್ಲಿಗೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಚುಕ್ಕೆ ಪ್ರಶ್ನೆ ೬೫೫, ೬೬೨, ೬೪೯ ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದಾರೆ

ಕಲಘಟಗಿಯಲ್ಲಿ ನ್ಯಾಯಾಲಯ ಪ್ರಾರಂಭಿಸುವುದು

೬೭೩. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿಯಲ್ಲಿ ಮುನ್ಸೀಫ್ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದೇ?

ಆ) ಹಾಗಿದ್ದಲ್ಲಿ, ಯಾವಾಗ ?